ಶ್ರೀಮಂತ, ನಾಲ್ಕೈದು ಕಾರ್ಖಾನೆಗಳನ್ನು ಹುಟ್ಟುಹಾಕಿದ್ದಾನೆ. **success succeeds everything** ಅಲ್ವಾ. ಈಗ ಎಲ್ಲರೂ ಅವಳನ್ನು ಒಪ್ಪಿಕೊಂಡಿದ್ದಾರೆ.'

'ನಾವು ಆ ಬಡಾವಣೆ ಬಿಟ್ಟ ಮೇಲೆ ಯಾರ ಸಂಪರ್ಕವು ಇಲ್ಲ' ಎಂದೆ. 'ವಸಂತನ ಹತ್ರ ಮಾತಾಡ್ತೀಯಾ?' ಎಂದಾಗ,

'ಹೂಂ, ಆದರೆ ಭಯವಾಗುತ್ತೆ' ಎಂದೆ

'ನೋ ಇಶ್ಯೂಸ್, ನಾನಿದ್ದೀನಿ' ಎಂದು ವಿಡಿಯೊ ಕಾಲ್ ಮಾಡಿ ಅವಳಿಗೆ ಹಲೋ ಹೇಳಿ ನನಗೆ ಕೊಟ್ಟ. ನನ್ನ ಮುಖ ನೋಡುತ್ತಲೇ, 'ಅರೆ ಜಗ್ಗಿ ಹೇಗಿದ್ದಿಯೋ' ಎಂದಾಗ ಕಣ್ತುಂಬಿತು. 'ವಸಂತಕ್ಕ ನನ್ನನ್ನು ಕ್ಷಮಿಸೆ, ನಾನು ತಪ್ಪು ಮಾಡಿಬಿಟ್ಟೆ. ಹಾಗೆ ಮಾಡಬಾರದಿತ್ತು...'

'ಅಳಬೇಡ್ವೊ, ಮಂಗಣ್ಣ. ನೀನೂ ನಮ್ಮ ಶೇಖರನ ಹಾಗೇ... ಏನೋ ಆಯಿತು ಹೋಗ್ಲಿ ಬಿಡು ನನಗದೆಲ್ಲ ನೆನಪಿಲ್ಲ. ಅಮ್ಮ ಹುಷಾರಾಗಿದ್ದಾರೇನೋ? ಮನೆಗೆ ಬಾ, ಹೆಂಡತಿ ಮಕ್ಕಳನ್ನ ಕರ್ಕೊಂಡು.'

'ಹೂಂ ಕಣೆ ಅಕ್ಕ, ಬರ್ತೀನಿ' ಎಂದೆ.

'ಸರ್ ನಿಮ್ಮನ್ನೆಲ್ಲೆಲ್ಲ ಹುಡುಕೋದು... ಬನ್ನಿ ಧಾರೆ ಆಯಿತು, ಇನ್ನೇನು ಮಾಂಗಲ್ಯಧಾರಣೆ' ಎನ್ನುತ್ತ ಈಶ್ವರ್ ಹುಡುಕಿಕೊಂಡು ಬಂದಾಗ, 'ಕಲ್ಯಾಣಿ ನೀನು ನಡಿ, ನಾನು ಇಗೋ ಬಂದೆ' ಎಂದು ಮುಖಕ್ಕೊಂದಿಷ್ಟು ನೀರೆರೆಚಿಕೊಂಡು ಶುಭ್ರನಾದೆ. ನನ್ನ ಕಳೆದುಹೋಗಿದ್ದ ಮಿತ್ರರ ಕೊಂಡಿ ಮತ್ತೆ ಸಿಕ್ಕಿತ್ತು.

'ಅಂದ್ಹಾಗೆ ಇವಳು ನನ್ನ ಶ್ರೀಮತಿ, ಹೆಸರೂ ಶ್ರೀಮತಿ. ಇವನು ಜಗನ್ನಾಥ, ಇವರ ಉಪ್ಪಿನ ಋಣ ನನ್ನ ಮೇಲಿದೆ' ಕಲ್ಯಾಣಿಯ ಮಾತು ಮುಗಿಯುವ ಮುನ್ನವೇ, 'ಶೇಖರನ ಮನೇಲಿ ನೋಡಿದ್ದೀನಿ. ನಿನ್ನ ಅಕ್ಕ, ವಸಂತ, ನಾನು, ಎಲ್ಲ ಒಂದೇ ಓರಗೆಯವರು' ಎಂದಾಗ ಎಲ್ಲವೂ ಮತ್ತಷ್ಟು ಆಪ್ತ ಎನ್ನಿಸಿತು.

★★★

ಸಂಜೆ ಐದೂವರೆಗೆ ರೈಲು. ಕಿಟಕಿಬದಿಗೆ ಕುಳಿತು ಪುಸ್ತಕ ಹಿಡಿದಿದ್ದೆ. ಯಾವುದೋ ಶಾಪ ವಿಮೋಚನೆಯಾದ ನಿರಾಳ. ಜೇಬಿನಲ್ಲಿದ್ದ ಫೋನು ಸಂದೇಶದ ಸಂಕೇತ ನೀಡಿದಾಗ ತೆರೆದು ನೋಡಿದೆ – ಹೊಸ ವಾಟ್ಸ್‌ಆ್ಯಪ್ ಗುಂಪಿಗೆ ಸೇರ್ಪಡೆಯಾಗಿದ್ದೆ. ವಸಂತ, ಕಲ್ಯಾಣಿ, ಶ್ರೀಮತಿ, ಶೇಖರ, ಉದಯ... ಗೆಳೆಯರ ಗುಂಪೇ ಅಲ್ಲಿತ್ತು.

'ಹಾಯ್', 'ವೆಲ್‌ಕಮ್ ಟು ಗ್ರೂಪ್', 'ಜಗ್ಗಿ ಹೇಗಿದ್ದಿಯೋ...' ಎಂಬ ಸಂದೇಶಗಳು ಮಿನುಗುತ್ತಿದ್ದವು. ಪುಸ್ತಕ ಮುಚ್ಚಿಟ್ಟು ಗುಂಪಿಗೆ ಉತ್ತರಿಸಲು ಅಣಿಯಾದೆ.

**ಕೆ.ವಿ. ರಾಜಲಕ್ಷ್ಮಿ**

ಎಂ.ಕಾಂ., ಎಲ್.ಎಲ್.ಬಿ. ಪದವೀಧರೆ. ದೂರ ಸಂಪರ್ಕ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ಲೆಕ್ಕಾಧಿಕಾರಿಯಾಗಿ ನಿವೃತ್ತರು. ಪ್ರಸ್ತುತ ವಕೀಲ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 200ಕ್ಕೂ ಹೆಚ್ಚು ಕತೆ, ಹಾಸ್ಯ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.